O.S.No.:169/2020
P.W.:1

ಈ ದಿನ ದಿಃ13.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಸಿಎಂಜೆ ವಕೀಲರಿಂದಃ

1. ದಾವಾಸ್ವತ್ತು ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ಸರ್ವೆ ನಂ.70ರಲ್ಲಿ ಸುಮಾರು 300 ಎಕರೆಗಿಂತಲ್ಲೂ ಹೆಚ್ಚು ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.70ರಲ್ಲಿ ಮರಿಗೌಡನದೊಡ್ಡಿ ಗ್ರಾಮದ ಗ್ರಾಮಸ್ಥರು ಸುಮಾರು ಜನರು ಅನಧೀಕೃತವಾಗಿ ಉಳುಮೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಜಮೀನು ಮಾರಾಟ ಮಾಡಿದ ಮಾರಾಟದಾರರು ಸಹ ಮೂಲತಃ ಸರ್ವೆ ನಂ.70ರಲ್ಲಿ ಅನಧೀಕೃತವಾಗಿ ಉಳುಮೆ ಮಾಡಿಕೊಂಡಿದ್ದವರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಜಮೀನು ಮಾರಾಟ ಮಾಡಿದವರು ಆ ಜಮೀನನ್ನು ಬೇರೆಯವರಿಂದ ಖರೀದಿಸಿದ್ದರು ಎಂದು ನುಡಿಯುತ್ತಾರೆ. ದಾವಾಸ್ವತ್ತು ಸಹ ಮೂಲತಃ ಸರ್ಕಾರಿ ಜಮೀನು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

2. ನನಗೆ ಜಮೀನು ಮಾರಾಟ ಮಾಡಿದ ಮಾರಾಟದಾರರಿಗೂ ಮತ್ತು ಪ್ರತಿವಾದಿಗೂ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಬಹಳ ಹಿಂದಿನಿಂದಲ್ಲೂ ವ್ಯಾಜ್ಯ ಇರುತ್ತದೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತನ್ನು ಖರೀದಿ ಮಾಡುವ ಕಾಲಕ್ಕೆ ಸದರಿ ಮೂರು ಎಕರೆ ಜಮೀನಿಗೆ ಸಂಬಂಧಿಸಿದಂತೆ ದುರಸ್ತಿ, ಪೋಡಿ ಮತ್ತು ಸ್ಕೆಚ್ ಆಗಿರಲಿಲ್ಲ ಎಂದರೆ ಸರಿ. ದಾವಾಸ್ವತ್ತಿನ ಚಕ್ಕುಬಂದಿ ನಿರ್ಧಾರವಾಗದೆ ಇದ್ದರು ಸುಳ್ಳು ಚಕ್ಕುಬಂದಿಯನ್ನು ತೋರಿಸಿ ನನ್ನ ಮಾರಾಟದಾರರು ದಾವಾಸ್ವತ್ತನ್ನು ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ನಾನು ಈಗ ಸದ್ಯಕ್ಕೆ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ನೀವು ಜಮೀನಿನಲ್ಲಿ

ಯಾವಾಗಲೂ ವಾಸವಿರುವುದಿಲ್ಲ ಎಂದರೆ ಸಾಕ್ಷಿಯು ಬಂದು ಹೋಗಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನಲ್ಲಿ ನಾನೇ ವೈಯಕ್ತಿಕವಾಗಿ ವ್ಯವಸಾಯ ಮಾಡುತ್ತೇನೆ. ದಾವಾಸ್ವತ್ತಿನ ಪೈಕಿ 1ಎಕರೆ 10 ಗುಂಟೆ ಜಮೀನಿನಲ್ಲಿ ಅನಧೀಕೃತವಾಗಿ ಉಳುಮೆ ಮಾಡುತ್ತಿದ್ದೇವೆ ಅದನ್ನು ತಮಗೆ ಮಂಜೂರು ಮಾಡಿಕೊಡಿ ಎಂದು ಪ್ರತಿವಾದಿಯ ತಂದೆಯವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ಕಂದಾಯ ಇಲಾಖೆಯವರು ಸ್ವೀಕರಿಸಿ ಅದಕ್ಕೆ ಸಂಬಂಧಿಸಿದಂತೆ ಸ್ವೀಕೃತಿ ಪ್ರತಿಯನ್ನು ಸಹ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಯಾವುದೇ ಜಮೀನು ಮಂಜಾರು ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನಲ್ಲಿ 1ಎಕರೆ 10ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಿ.15.03.2004ರಲ್ಲಿ ಜಮೀನನ್ನು ಮಂಜೂರು ಮಾಡಿ ಪ್ರತಿವಾದಿಯ ತಂದೆಗೆ ಮಂಜೂರಾತಿ ಪತ್ರವನ್ನು ಸಹ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಮೂರು ಎಕರೆ ಜಮೀನಿನಲ್ಲಿ ಅವರಿಗೆ ಯಾವುದೇ ಜಮೀನು ಮಂಜೂರಾಗಿಲ್ಲ ಎಂದು ನುಡಿಯುತ್ತಾರೆ.

4. ದಾವಾಸ್ವತ್ತಿನ ಪೈಕಿ 1ಎಕರೆ 10 ಗುಂಟೆ ಜಮೀನಿನಲ್ಲಿ ಪ್ರತಿವಾದಿಯ ತಂದೆಯವರೆ ಮೊದಲಿನಿಂದಲ್ಲೂ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಯವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ದಾವಾಸ್ವತ್ತಿನ ಪೈಕಿ 1ಎಕರೆ 10 ಗುಂಟೆ ಜಮೀನಿನಲ್ಲಿ ಪ್ರತಿವಾದಿಯೇ ಈಗ ಸ್ವಾಧೀನಾನುಭವದಲ್ಲಿದ್ದು, ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ ದಾವಾಸ್ವತ್ತನ್ನು ಮಾರಾಟ ಮಾಡಿದ ನನ್ನ ಮಾರಾಟದಾರರು ಸಹ ಪ್ರತಿವಾದಿಯು ಸ್ವಾಧೀನಾನುಭವದಲ್ಲಿರುವ 1ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಯಾವತ್ತು ಯಾವುದೇ ಪ್ರಕಾರವಾಗಿ ತಕರಾರು ಮಾಡಿರಲಿಲ್ಲ ಎಂದರೆ ಸರಿಯಲ್ಲ.

5. 3ಎಕರೆ ಜಮೀನನ್ನು ನಾನು ಖರೀದಿ ಮಾಡಿದ ನಂತರ 1ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನಾನು ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇನೆಂದು ಪ್ರತಿವಾದಿಯು ನನ್ನ ವಿರುದ್ದ ಅಸಲು ದಾವಾ ಸಂಖ್ಯೆ 295/2019ರಡಿಯಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ದಾವೆ ಹೂಡಿರುವುದು ನಿಜವೆಂದು ನುಡಿಯುತ್ತಾರೆ. ಪ್ರತಿವಾದಿಯು ನನ್ನ ವಿರುದ್ದ ದಾವೆಯನ್ನು ಹೂಡಿದ ನಂತರ ನಾನು ಈ ದಾವೆಯನ್ನು ಆತನ ವಿರುದ್ದ ಹೂಡಿರುತ್ತೇನೆ ಎಂದರೆ ಸಾಕ್ಷಿಯು ನನಗೆ ತೊಂದರೆ ಕೊಟ್ಟಕಾರಣಕ್ಕೆ ಹೂಡಿರುತ್ತೇನೆ, ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಪೈಕಿ 1ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನಾನು ಪ್ರತಿವಾದಿಗೆ ತೊಂದರೆ ಕೊಟ್ಟ ಕಾರಣಕ್ಕೆ ಅವರು ನನ್ನ ವಿರುದ್ದ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರೆ ನನಗೆ ತೊಂದರೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ಯಾವತ್ತು ನನಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನೇ ಪ್ರತಿವಾದಿಗೆ ಸಂಬಂಧಿಸಿದ 1ಎಕರೆ 10 ಗುಂಟೆ ಜಮೀನನ್ನು ಅತಿಕ್ರಮಣ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಬರುವ ಪ್ರತಿವಾದಿಯ 1ಎಕರೆ 10 ಗುಂಟೆ ಜಮೀನನ್ನು ಕಬಳಿಸುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವಾಸ್ವತ್ತಿನಲ್ಲಿ ಪ್ರತಿವಾದಿ ಸ್ವಾಧೀನಾನುಭವದಲ್ಲಿರುವ 1ಎಕರೆ 10 ಗುಂಟೆ ಜಮೀನಿನಲ್ಲಿ ಮರಗಳು ಇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಂಬಂಧಿಸಿದ 1ಎಕರೆ 10 ಗುಂಟೆ ಜಮೀನಿನಲ್ಲಿದ್ದ ಮರಗಳಿಗೆ ಬೆಂಕಿ ಹಚ್ಚಿ ನಾಶಪಡಿಸಲು ಪ್ರಯತ್ನಪಟ್ಟಾಗ ಪ್ರತಿವಾದಿಯು ನನ್ನ ವಿರುದ್ದ ಹಾರೋಹಳ್ಳಿ ಪೊಲೀಸ್ ಠಾಣೆಗೆ

ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಈ ಸಂಬಂಧ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಪ್ರತಿವಾದಿಗೆ ಸಂಬಂಧಿಸಿದ 1ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ತೊಂದರೆ ನೀಡಬಾರದೆಂದು ನನಗೆ ಬುದ್ದಿವಾದ ಹೇಳಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

(ರಾಧ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.